ದಿಃ 09-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : 1 ರಿಂದ 3 ನೇ ಪ್ರತಿವಾದಿ ಪರ ಶ್ರೀ. SSP. ವಕೀಲರಿಂದ:**

ವಾದಪತ್ರದಲ್ಲಿ ಬರೆದ ಸಂಗತಿಗಳು ನನಗೆ ಗೊತ್ತಿರುತ್ತದೆ. ಮಲ್ಲಿಕಾರ್ಜುನ @ ಮಲ್ಲು ಇವರಿಗೆ ಮೊದಲು 1 ನೇ ಪ್ರತಿವಾದಿಯೊಂದಿಗೆ ವಿವಾಹ ಆಗಿತ್ತು ಎಂದರೆ ನನಗೆ ಗೊತ್ತಿಲ್ಲ. ಅವರಿಗೆ ಇಬ್ಬಳು ಮಕ್ಕಳು ಇರುತ್ತಾರೆ ಎಂದರೆ ಸಾಕ್ಷಿ ಮೊದಲು ಹೌದು ಎಂದು ನಂತರ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮಕ್ಕಳ ಹೆಸರು ಅಮಿತ ಮತ್ತು ಅರ್ಪಿತಾ ಎಂದು ಇರುತ್ತದೆ ಎಂದರೆ ಸರಿ. ಮಲ್ಲಿಕಾರ್ಜುನ @ ಮಲ್ಲು ಮತ್ತು 1 ನೇ ಪ್ರತಿವಾದಿ ಮತ್ತು ಮಕ್ಕಳು ಕಲ್ಲೂರು ತಾಂಡಾದಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಮಲ್ಲಿಕಾರ್ಜುನ @ ಮಲ್ಲು ನನ್ನೊಂದಿಗೆ ಅಫಜಲಪುರದಲ್ಲಿ ವಾಸವಾಗಿದ್ದರು ಎಂದು ನುಡಿಯುತ್ತಾರೆ. ಮಲ್ಲಿಕಾರ್ಜುನ @ ಮಲ್ಲು ನೊಂದಿಗೆ ನನ್ನದು ಮದುವೆಯಾಗಿದೆ ಎಂದು ತೋರಿಸಲು ವಿವಾಹ ನೊಂದಣಿ ಮಾಡಿಸಿರುವುದಿಲ್ಲ. ಮುಂದುವರೆದು ಮದುವೆ ಫೋಟೋ ಮತ್ತು ಸಿಡಿ ಇರುತ್ತವೆ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದ ಮುಂದೆ ಹಾಜರುಪಡಿಸಿದ ಮದುವೆ ಆಮಂತ್ರಣ ಪತ್ರಿಕೆ ಕೊಟ್ಟಿ ಇರುತ್ತದೆ ಎಂದರೆ ಸರಿಯಲ್ಲ ಮಲ್ಲಿಕಾರ್ಜುನ @ ಮಲ್ಲು ಆತನ ಸಹೋದರರು ನಿಮ್ಮ ಮದುವೆಗೆ ಹಾಜರಾದ ಕುರಿತು ಫೋಟೋ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಅವರು ಯಾರೂ ಮದುವೆಗೆ ಬಂದಿಲ್ಲ ಎಂದು ನುಡಿಯುತ್ತಾರೆ. ನನ್ನದು ಮಲ್ಲಿಕಾರ್ಜುನ @ ಮಲ್ಲು ರವರೊಂದಿಗೆ ಮದುವೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮಲ್ಲಿಕಾರ್ಜುನ @ ಮಲ್ಲು ಈತನು ತನ್ನ ಸೇವಾ ಪುಸ್ತಕದಲ್ಲಿ ಹೆಸರು ನೊಂದಾಯಿಸಿಲ್ಲ ಎಂದರೆ ಸರಿ. ಮಲ್ಲಿಕಾರ್ಜುನ @ ಮಲ್ಲು ಆತನ ಸೇವಾ ಪುಸ್ತಕದಲ್ಲಿ 1 ನೇ ಪ್ರತಿವಾದಿ ಹೆಸರು ದಾಖಲಿಸಿರುತ್ತಾರೆ ಎಂದರೆ ಸಾಕ್ಷಿ ಆತನ ಅಣ್ಣನ ಹೆಂಡತಿ ಹೆಸರು ಎಂದು ದಾಖಲಿಸಿರುತ್ತಾನೆ ಎಂದು ನುಡಿಯುತ್ತಾರೆ.

ಮಲ್ಲಿಕಾರ್ಜುನ @ ಮಲ್ಲು ಈತನ ಮರಣ ಪ್ರಮಾಣ ಪತ್ರದಲ್ಲಿ ಹೆಂಡತಿ ಹೆಸರು ವಲಮಾಲ ಎಂದು ತೋರಿಸಲಾಗಿದೆ ಎಂದರೆ ಸರಿ. ಮೃತ ಮಲ್ಲಿಕಾರ್ಜುನ @ ಮಲ್ಲು ಈತನ ವಾರಸುದಾರರು ವಲಮಾಲ, ಪ್ರತನ್ನ ಮತ್ತು ಅರ್ಪಿತಾ ಮಾತ್ರಾ ಇರುತ್ತಾರೆ ಎಂದು ವಾರಸ

ಪತ್ರ ನೀಡಿರುತ್ತಾರೆ ಎಂದರೆ ಸರಿ . ನನಗೂ ಮತ್ತು ಮೃತ ಮಲ್ಲಿಕಾರ್ಜುನ @ ಮಲ್ಲು ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮೃತ ಮಲ್ಲಿಕಾರ್ಜುನ @ ಮಲ್ಲು ಈತನ ಸೌಲಭ್ಯ ಪಡೆಯಲು ಅವನ ಹೆಂಡತಿ ಎಂದು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಮಲ್ಲಿಕಾರ್ಜುನ @ ಮಲ್ಲು ರವರೊಂದಿಗೆ ಮದುವೆಯಾದ ನಂತರ 6 ತಿಂಗಳ ಕಾಲ ತವರುಮನೆಯಲ್ಲಿದ್ದು ಆನಂತರ ಅಫಜಲಪುರದಲ್ಲಿ ಬಾಡಿಗೆ ಮನೆ ಮಾಡಿ ಇದ್ದೆವು. ನಾನು ಈ ರೀತಿ ನನ್ನ ವಾದಪತ್ರದಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಮೃತ ಮಲ್ಲಿಕಾರ್ಜುನ @ ಮಲ್ಲು ಸೇವಾ ಅನುಕಂಪ ಸೌಲಭ್ಯ ಪಡೆಯಲು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು : **4** ರಿಂದ **8** ನೇ ಪ್ರತಿವಾದಿ ಪರ **Ld. AGP** ರವರಿಂದ :</u>

ನನ್ನ ಗಂಡನ ಹೆಸರು ಮಲ್ಲಿಕಾರ್ಜುನ @ ಮಲ್ಲು ಇರುತ್ತದೆ. ದಿಃ 19-04-2016 ರಂದು ನನ್ನ ವಿವಾಹ ಆಗಿರುತ್ತದೆ. ನನ್ನ ಮತ್ತು ಮಲ್ಲಿಕಾರ್ಜುನ @ ಮಲ್ಲು ರವರ ನಡುವೆ ಆದ ಕುರಿತು ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಮೃತ ಮಲ್ಲಿಕಾರ್ಜುನ @ ಮಲ್ಲು ಪ್ರಾಥಮಿಕ ಶಾಲಾ ಶಿಕ್ಷಕನಾಗಿ ಶಿವೂರು ಗ್ರಾಮದಲ್ಲಿ ಕೆಲಸ ಮಾಡುತ್ತಿದ್ದರು. ನಮ್ಮ ಮದುವೆಯಾದ ನಂತರ ನನ್ನ ಗಂಡನೊಂದಿಗೆ ಇದ್ದೇನು. ಸೇವಾ ಪುಸ್ತಕದಲ್ಲಿ ನನ್ನ ಹೆಸರು ದಾಖಲಿಸಲು ನಾನು ಯಾವುದೇ ಕ್ರಮ ಕೈಗೊಂಡಿಲ್ಲ ಎಂದರೆ ಸರಿ ನನ್ನದು ಮಲ್ಲಿಕಾರ್ಜುನ @ ಮಲ್ಲು ರವರ ಹೆಸರು ಇರುವ ಆಧಾರ ಕಾರ್ಡ ಇರುತ್ತದೆ. ನನ್ನ ಗಂಡ ಮಲ್ಲಿಕಾರ್ಜುನ @ ಮಲ್ಲು ಸರಕಾರಿ ನೌಕರಸ್ಥ ಆಗಿರುವುದರಿಂದ ಪಡಿತರ ಚೀಟಿ ಮಾಡಿರುವುದಿಲ್ಲ. ನಾನು ಶಾಲೆ ಕಲಿತಿದ್ದು ಎಲಾ ತಿಳುವಳಿಕೆ ಇರುತ್ತದೆ ಎಂದರೆ ಸರಿ.

ಮೃತ ಮಲ್ಲಿಕಾರ್ಜುನ @ ಮಲ್ಲು ಈತನು ನಿರ್ವಹಿಸುತ್ತಿದ್ದ ಕಚೇರಿಗೆ ಹೋಗಿ ಆತನ ಸೇವಾ ಪುಸ್ತಕ ಪರಿಶೀಲನೆ ಮಾಡಿ ಅದರಲ್ಲಿ ನನ್ನ ಹೆಸರು ನೊಂದಾಯಿಸಲು ಪ್ರಯತ್ನಿಸಿಲ್ಲ ಎಂದರೆ ಸರಿ. ಮಲ್ಲಿಕಾರ್ಜುನ @ ಮಲ್ಲು ಆತನ ಸೇವಾ ಪುಸ್ತಕದಲ್ಲಿ ನಾಮಿನಿ ಸ್ಥಳದಲ್ಲಿ ವನಮಾಲ ರವರ ಹೆಸರು ಇರುತ್ತದೆ ಎಂದರೆ ಸರಿ. ಮೃತ ನೌಕರಸ್ಥನ ಕುಟುಂಬ ಸದಸ್ಯರ

ಪಟ್ಟಿಯಲ್ಲಿ ವನಮಾಲ ರವರ ಹೆಸರು ಇರುತ್ತದೆ ಎಂದರೆ ಸರಿ. KGID ದಾಖಲಾತಿಯ ನಾಮಿನಿ ಸ್ಥಳದಲ್ಲಿ ವನಮಾಲ ರವರ ಹೆಸರು ಇರುತ್ತದೆ ಎಂದರೆ ಸರಿ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ

ಸಿವಿಲ್ & ಪ್ರ.ದ.ನ್ಯಾ ದಂಡಾಧಿಕಾರಿಗಳು
ಅಫಜಲಪೂರ